ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮದಿಂದ ದರ ಒಪ್ಪಂದ ನೀಡುವಿಕೆಯಲ್ಲಿ ಆಗುವ ದುರಾಚರಣೆ ಬಗ್ಗೆ.

೬೪೩. (೧೩೬೮) ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ೧೯೮೮-೮೯ ಹಾಗೂ ೮೯-೯೦ನೇ ಸಾಲಿನಲ್ಲಿ ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮವು ಬೆಂಗಳೂರು ನಗರದಲ್ಲಿ ಸಣ್ಣ ಕೈಗಾರಿಕಾ ಘಟಕಗಳ ಪರವಾಗಿ ಪಡೆದ ಒಟ್ಟು ದರ ಒಪ್ಪಂದದ ಆದೇಶಗಳು,

(ಆ) ಮೇಲಿನ ಅವಧಿಯಲ್ಲಿ ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮವು ದರ ಒಪ್ಪಂದದ ಆದೇಶಗಳನ್ನು ಪಡೆದು ಯಾವ ಯಾವ ಘಟಕಗಳಿಗೆ ನೀಡಿದೆ ?

(ಇ) ದರ ಒಪ್ಪಂದ ನೀಡುವಾಗ ಸಣ್ಣ ಘಟಕಗಳ ಆಯ್ಕೆಗಾಗಿ ಪರಿಪಾಲಿಸುತ್ತಿರುವ ನಿಯಮಾವಳಿಗಳು.

(ಈ) ದರ ಒಪ್ಪಂದವನ್ನು ನೀಡುವಾಗ ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮದಲ್ಲಿ ಕೆಲಸ ಮಾಡುತ್ತಾ ಇರುವ ಅಧಿಕಾರಿಗಳು ದುರಾಚರಣೆಯಲ್ಲಿ ತೊಡಗಿರುವರೆಂಬ ಅಂಶ ಖಚಿತವಾದುದೇ ?

(ಉ) ದುರಾಚರಣೆಯಲ್ಲಿ ತೊಡಗಿರುವ ಹಾಗೂ ೧೦-೧೫ ವರ್ಷಗಳವರೆಗೆ ಒಂದೇ ಸ್ಥಳದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳನ್ನು ಬದಲಾಯಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀಮತಿ ಸುಮಾ ವಸಂತ (ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪ ಸಚಿವೆಯರು) .—

(ಅ) ದರ ಒಪ್ಪಂದವನ್ನು ನಿಗಧಿಪಡಿಸುವುದು ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮದ ಧ್ಯೇಯ. ನಿಗಮವು ತಾನಾಗೇ ಯಾವುದೇ ದರ ಒಪ್ಪಂದದ ಸಣ್ಣ ಪ್ರಮಾಣದ ಘಟಕಗಳ ಪರವಾಗಿ ಆದೇಶಗಳನ್ನು ಪಡೆಯುವುದಿಲ್ಲ. ಬೇಡಿಕೆದಾರರಿಂದ ತಮ್ಮ ಕೋರಿಕೆಯನ್ನು ನೇರವಾಗಿ ದರ ಒಪ್ಪಂದದ ಘಟಕಗಳಿಗೆ ನೀಡಬಹುದಾಗಿರುತ್ತವೆ. ಕೆಲವು ಸಂದರ್ಭಗಳಲ್ಲಿ ಇಲಾಖೆಗಳು/ಸಂಸ್ಥೆಗಳು ನಿಗಮಕ್ಕೆ ಸೆಲ್ಲಿಸುತ್ತವೆ. ಇಂತಹ ಸಂದರ್ಭಗಳಲ್ಲಿ ಮಾತ್ರ ನಿಗಮವು ದರ ಒಪ್ಪಂದದ ಘಟಕಗಳ ಮುಖಾಂತರ ಸರಬರಾಜು ಮಾಡಲಾಗುವುದು. ೧೯೮೮-೮೯ರಲ್ಲಿ ೮ ಹಾಗೂ ೧೯೮೯-೯೦ರಲ್ಲಿ ೩೨ ಆದೇಶಗಳು ನಿಗಮಕ್ಕೆ ಲಭ್ಯವಾಗಿವೆ.

ಡಿ.ಜಿ.ಎಸ್. ಆಂಡ್ ಡಿ ಹಾಗೂ ರಾಜ್ಯ ಆರೋಗ್ಯ ಇಲಾಖೆಯು ಹೊರಡಿಸಿದ ಟೆಂಡರ್‌ಗಳಲ್ಲಿ ಭಾಗವಹಿಸಿ, ದರ ಒಪ್ಪಂದಗಳ ಆದೇಶಗಳನ್ನು ಪಡೆದು ನಿಗಮದ ಮುಖಾಂತರ ಟೆಂಡರಿನಲ್ಲಿ ಭಾಗವಹಿಸಿದ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿಗೆ ಮರು ಆದೇಶಗಳನ್ನು ನಿಗಮವು ಕೊಡುತ್ತದೆ. ೧೯೮೯-೯೦ರಲ್ಲಿ ೩೯ ಆದೇಶಗಳನ್ನು ಮಾತ್ರ ಪಡೆದು ಬೆಂಗಳೂರು ನಗರದ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿಗೆ ವಿತರಿಸಲಾಗಿದೆ.

(ಆ) ವಿವರಗಳನ್ನು ಅನುಸೂಚಿಯಲ್ಲಿ ನಮೂದಿಸಲಾಗಿದೆ.

(ಇ) ನಿಗಮವು ಈ ಕೆಳಕಂಡ ನಿಯಮಾವಳಿಗಳನ್ನು ಪಾಲಿಸುತ್ತಿದೆ :—

(೧) ಸಣ್ಣ ಕೈಗಾರಿಕಾ ಘಟಕಗಳು ಶಾಶ್ವತ ನೋಂದಣಿ ಪತ್ರವನ್ನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯಿಂದ ಪಡೆದಂ ನಿಗಮದಲ್ಲಿ ನೋಂದಾಯಿಸಬೇಕು.

(೨) ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮದಲ್ಲಿ ನೋಂದಾವಣೆಯಾದಂತಹ ಘಟಕಗಳಿಂದ ಹಾಗೂ ಚಾಲ್ತಿ ದರ ಒಪ್ಪಂದದಾರರಿಂದ ಟೆಂಡರನ್ನು ಕರೆಯುತ್ತದೆ.

(೩) ಈ ರೀತಿ ಪಡೆದ ದರದ ತುಲನಾತ್ಮಕ ಪಟ್ಟಿಯನ್ನು ಅದಕ್ಕಾಗಿಯೇ ರಚಿತವಾದ ಮುಂಡಳಿಯ ಉಪಸಮಿತಿಯ ಮುಂದೆ ಇಡಲಾಗುವುದು. ಈ ಸಮಿತಿಯು ದರವನ್ನು ನಿಗಧಿಗೊಳಿಸುತ್ತದೆ.

(೪) ಈ ರೀತಿ ನಿಗಧಿಪಡಿಸಿದ ದರವನ್ನು ಎಲ್ಲಾ ಟೆಂಡರ್‌ದಾರರಿಗೂ ಹಾಗೂ ಹೊಸದಾಗಿ ಬಂದಂತಹ ಘಟಕಗಳಿಗೆ ನಿಗಧಿಪಡಿಸಿದ ದರದಲ್ಲಿ ಸರಬರಾಜು ಮಾಡಲು ತಮ್ಮ ಒಪ್ಪಿಗೆಯನ್ನು ಸೂಚಿಸಲು ತಿಳಿಸಲಾಗುತ್ತದೆ. ನಿಗಮವು ದರ ಒಪ್ಪಂದದ ಷರತ್ತುಗಳನ್ನು ಹಾಗೂ ನಿಗದಿಗೊಳಿಸಿದ

ದರದಲ್ಲಿ ಸರಬರಾಜು ಮಾಡಲು ಒಪ್ಪಿಗೆ ಸೂಚಿಸಿದ ಎಲ್ಲಾ ಘಟಕಗಳಿಗೆ ದರ ಒಪ್ಪಂದದ ಮಾನ್ಯತೆಯನ್ನು ನೀಡುತ್ತದೆ.

(ಜಿ) ಈ ರೀತಿ ಮಾನ್ಯತೆ ನೀಡುವಾಗ ಘಟಕಗಳು ದರ ಒಪ್ಪಂದದ ಷರತ್ತುಗಳಿಗೆ ಒಪ್ಪಿ ನಿಗಧಿಗೊಳಿಸುವ ಭದ್ರತಾ ಠೇವಣಿಯನ್ನು ಹಾಗೂ ಒಪ್ಪಂದದ ಕರಾರು ಪತ್ರವನ್ನು ಕೊಡಬೇಕಾಗುತ್ತದೆ.

(ಟಿ) ಘಟಕಗಳು ಕಳೆದ ವರ್ಷದ ದರ ಒಪ್ಪಂದದಾರರಾದಲ್ಲಿ, ತಾವು ಮಾಡಿದ ವಹಿವಾಟಿನ ಮೇಲೆ ನಿಗಮಕ್ಕೆ ಸಲ್ಲಿಸಬೇಕಾದ ಸೇವಾ ಶುಲ್ಕವನ್ನು ಪ್ರಸಕ್ತ ಸಾಲಿನ ದರ ಒಪ್ಪಂದದ ಮಾನ್ಯತೆ ನೀಡುವ ಮುಂಚೆ ಪಾವತಿ ಮಾಡಬೇಕು ಹಾಗೂ ತಮ್ಮ ಖಾತೆಯಲ್ಲಿ ಇಡಬೇಕಾದ ಭದ್ರತಾ ಠೇವಣಿ ಮೊಬಲಗಿನಲ್ಲಿ ಕಡಿಮೆ ಇದ್ದರೆ ಅದನ್ನು ಭರ್ತಿ ಮಾಡಬೇಕು.

(ಈ) ಇಲ್ಲ.

(ಉ) ನಿಗಮವು ೧೯೪೯ರಿಂದ ಕಾರ್ಯಾಚರಣೆಯಲ್ಲಿ, ತೊಡಗಿರುವುದರಿಂದ ಯಾವ ಅಧಿಕಾರಿಯು ೧೦–೧೫ ವರ್ಷಗಳಿಂದ ಒಂದೇ ಸ್ಥಳದಲ್ಲಿ ಕೆಲಸ ಮಾಡುತ್ತಿರುವ ಪ್ರಶ್ನೆ ಉದ್ಭವಿಸುವುದಿಲ್ಲ. ದುರಾಚರಣೆಯಲ್ಲಿ ತೊಡಗಿರುವ ಬಗ್ಗೆ ಯಾವ ಸಾಕ್ಷ್ಯಾಧಾರಗಳು ಇಲ್ಲ.

ಅನುಸೂಚಿ—ಅ

ಕೆ. ಎಸ್. ಐ. ಎಂ .ಸಿ. ಯವರು ನಿಗದಿ ಪಡಿಸಿರುವ ದರ ಒಪ್ಪಂದದಡಿಯಲ್ಲಿ ೧೯೮೯–೯೦ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ನೆಲೆಸಿರುವ ಸಣ್ಣ ಕೈಗಾರಿಕಾ ಘಟಕಗಳಿಗೆ ನೀಡಿರುವ ಸರಬರಾಜು ಆದೇಶಗಳ ವಿವರ.

೧. ಅಭಿನಯ ಇಂಡಸ್ಟ್ರೀಸ್
೨. ಅನುಪಮ್ ಫ್ಯಾಬ್ಸ್
೩. ಅನಿಲ್ ಇಂಡಸ್ಟ್ರೀಸ್
೪. ಅಶೋಕ ಇಂಡಸ್ಟ್ರೀಸ್
೫. ಬಾಲಾಜಿ ಇಂಡಸ್ಟ್ರೀಸ್ [redacted]
೬. ಬೆಂಗಳೂರು ಇಂಜಿನಿಯರಿಂಗ್
೭. ಬೆನಕ ಇಂಜಿನಿಯರಿಂಗ್ ವರ್ಕ್ಸ್
೮. ಚಂದನ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್
೯. ಡಿಲೈಟ್ ಇಂಡಸ್ಟ್ರೀಸ್
೧೦. ಹಾಸನ ಇಂಡಸ್ಟ್ರೀಸ್
೧೧. ಜಾನ್ಸಿ ಸ್ಟೀಲ್ ಇಂಡಸ್ಟ್ರೀಸ್
೧೨. ಕವಿತ ಎಂಟರ್‌ಪ್ರೈಸಸ್
೧೩. ಮಹೇಂದ್ರ ಟ್ರೇಡಿಂಗ್ ಕಾರ್ಪೊರೇಷನ್
೧೪. ಮೂರ್ತಿ ಇಂಜನಿಯರಿಂಗ್ ಕಾರ್ಪೊರೇಷನ್
೧೫. ನಂದಿ ಇಂಡಸ್ಟ್ರಿಯಲ್ ಪ್ಯಾಡೆಕ್ಟ್ಸ್
೧೬. ಪಿ. ಎಂ. ರಾಜ ಟ್ರೇಡರ್ಸ್
೧೭. ಪ್ರಗತಿ ಸ್ಟೀಲ್ ಇಂಡಸ್ಟ್ರೀಸ್
೧೮. ಶಾಸನ್ ಇಂಡಸ್ಟ್ರೀಸ್
೧೯. ಎಸ್.ಕೆ.ಬಿ. ಎಂಟರ್‌ಪ್ರೈಸಸ್

೨೦. ಸೌತ್ ಇಂಡಿಯಾ ಫ್ಯಾಬ್ರಿಕೇಟರ್ಸ್
೨೧. ಶ್ರೀ ಚನ್ನಕೇಶವ ಎಂಟರ್‌ಪ್ರೈಸಸ್
೨೨. ಶ್ರೀ ರಾಜಲಕ್ಷ್ಮಿ ಇಂಡಸ್ಟ್ರೀಸ್
೨೩. ಶ್ರೀ ರಾಜೇಶ್ವರಿ ಇಂಡಸ್ಟ್ರಿಯಲ್ ಕಾರ್ಪೊರೇಷನ್
೨೪. ಶ್ರೀ ಸಿದ್ಧಲಿಂಗೇಶ್ವರ ವರ್ಕ್ಸ್‌ಶಾಪ್
೨೫. ಶ್ರೀ ವಿಜಯಲಕ್ಷ್ಮಿ ಸ್ಟೀಲ್ ಫರ್ನಿಚರ್ಸ್
೨೬. ತ್ರಿವೇಣಿ ಇಂಡಸ್ಟ್ರೀಸ್
೨೭. ವಿಜಯಾ ಇಂಜನಿಯರಿಂಗ್ ಇಂಡಸ್ಟ್ರೀಸ್
೨೮. ವಿಜಯ ಸರ್ಜಿಕಲ್ಸ್
೨೯. ಕರ್ನಾಟಕ ವಿವಿ. ಸ್ಟೀಲ್ ಇಂಡಸ್ಟ್ರೀಸ್
೩೦. ಎಸ್. ಕೆ. ಸ್ಟೀಲ್ ಇಂಡಸ್ಟ್ರೀಸ್
೩೧. ಒಮನ್ ಇಂಡಸ್ಟ್ರೀಸ್
೩೨. ಕುಮಾರ್ ಇಂಡಸ್ಟ್ರೀಸ್
೩೩. ಆರ್ಯಮಿತ್ರ ಇಂಡಸ್ಟ್ರೀಸ್
೩೪. ಆದಿಶಕ್ತಿ ಇಂಡಸ್ಟ್ರೀಸ್
೩೫. ಬೆಂಗಳೂರು ವುಡ್ ಇಂಡಸ್ಟ್ರೀಸ್
೩೬. ರಮೇಶ್ ಇಂಡಸ್ಟ್ರೀಸ್
೩೭. ವೆಂಕೋ ವುಡ್ ವರ್ಕ್ಸ್
೩೮. ಯುನಿಟಿ ಪ್ರಿಂಟರ್ಸ್

ಸಣ್ಣ ಕೈಗಾರಿಕೆಗಳ ಪರವಾಗಿ ನಿಗಮದವರು ಸರಕು ಖರೀದಿ ಇಲಾಖೆ ಹಾಗೂ ಆರೋಗ್ಯ ಇಲಾಖೆಯಲ್ಲಿ ಪಡೆದುಕೊಂಡಿರುವ ದರ ಒಪ್ಪಂದದಡಿಯಲ್ಲಿ ಸಣ್ಣ ಕೈಗಾರಿಕೆಗಳಿಗೆ ನೀಡಿರುವ ಸರಬರಾಜು ಆದೇಶಗಳ ವಿವರ.

೧. ಎಸ್. ಎಂ. ಫಾರ್ಮಾಸಿಟಿಕಲ್ಸ್
೨. ಪ್ರಶಾಂತಿ ಪೇಪರ್ ಪ್ರಾಡಕ್ಟ್ಸ್
೩. ಪೂರ್ಣವಾ ಎಲೆಕ್ಟ್ರಾನಿಕ್ಸ್
೪. ರಾಜೇಂದ್ರ ಕೆಮಿಕಲ್ಸ್
೫. ನಾಗೇಂದ್ರ ಕೆಮಿಕಲ್ಸ್ ಮತ್ತು ಏಜೆನ್ಸೀಸ್ ಕಂಪನಿ

ಅನುಸೂಚಿ—ಬಿ

ಕೆ. ಎಸ್., ಐ. ಎಂ. ಸಿ, ಯವರು ನಿಗದಿ ಪಡಿಸಿರುವ ದರ ಒಪ್ಪಂದದಡಿಯಲ್ಲಿ ೧೯೮೮–೮೯ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ನೆಲೆಸಿರುವ ಸಣ ಕೈಗಾರಿಕಾ ಘಟಕಗಳಿಗೆ ನೀಡಿರುವ ಸರಬರಾಜು ಆದೇಶಗಳ ವಿವರ.

೧. ಎಬಿಸಿ ಕರ್ನಾಟಕ ಸ್ಟೀಲ್ ಇಂಡಸ್ಟ್ರೀಯಲ್ ಕಾರ್ಪೊರೇಷನ್
೨. ಅಭಿನಯ ಇಂಡಸ್ಟ್ರೀಸ್
೩. ಆನುಪಮ್ ಫ್ಯಾಬ್ಸ್
೪. ಶ್ರೀ ರಾಜರಾಜೇಶ್ವರಿ ಇಂಡಸ್ಟ್ರೀಯಲ್ ಕಾರ್ಪೊರೇಷನ್
೫. ಶ್ರೀ ಸಿದ್ಧಲಿಂಗೇಶ್ವರ ವರ್ಕ್ ಶಾಪ್
೬. ಶ್ರೀ ಚನ್ನಕೇಶವ ಎಂಟರ್‌ಪ್ರೈಸಸ್
೭. ಶ್ರೀ ವಿಜಯಲಕ್ಷ್ಮಿ ಸ್ಟೀಲ್ ಫರ್‌ನೀಚರ್
೮. ಎಂಪಿಇಇ ಎಂಟರ್‌ಪ್ರೈಸಸ್

ಸಣ್ಣ ಕೈಗಾರಿಕೆಗಳ ಪರವಾಗಿ ನಿಗಮದವರು ಸರಕು ಖರೀದಿ ಇಲಾಖೆ ಹಾಗೂ ಆರೋಗ್ಯ ಇಲಾಖೆಯಲ್ಲಿ ಪಡೆದುಕೊಂಡಿರುವ ದರ ಒಪ್ಪಂದದಡಿಯಲ್ಲಿ ಸಣ್ಣ ಕೈಗಾರಿಕೆಗಳಿಗೆ ನೀಡಿರುವ ಸರಬರಾಜು ಆದೇಶಗಳ ವಿವರ.

—ಯಾವುದೇ ಆರ್ಡರ್ ಬಂದಿರುವುದಿಲ್ಲ—

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧಿಕಾರಿಗಳನ್ನು/ನೌಕರರನ್ನು ರಪ್ತು ಮೇಳಗಳಿಗೆ ಕಳುಹಿಸಿದ ಬಗ್ಗೆ

೧೨೮೩. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ)—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ೧೯೮೮–೮೯ರಲ್ಲಿ ವಿವಿಧ ರಪ್ತು ಮೇಳ ಹಾಗೂ ರಪ್ತು ಮಾರುಕಟ್ಟೆ ಕಂಡುಹಿಡಿಯುವ ಸಲುವಾಗಿ ಮಿಯಾಮಿ, ಯು.ಎಸ್.ಎ. ಹಾಗೂ ಮ್ಯಾಂಚೆಸ್ಟರ್, ಯು.ಕೆ. ರಪ್ತು ಮೇಳಗಳಿಗೆ ಕಳುಹಿಸಿದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧಿಕಾರಿಗಳ/ನೌಕರರ ಹೆಸರುಗಳು.

ಆ) ಮೇಳಗಳಲ್ಲಿ ಭಾಗವಹಿಸಲು ತಗುಲಿದ ವೆಚ್ಚ.

ಇ) ಈ ಮೇಳಗಳಲ್ಲಿ ಮಾರಾಟದ ಮೊತ್ತ.

ಈ) ೧೯೮೮–೮೯ರಲ್ಲಿ ನೇರ ರಫ್ತಿನಿಂದ ಗಳಿಸಿದಂತಹ ಮೊತ್ತ.

ಶ್ರೀಮತಿ ಸಂಪಾ ವಸಂತ (ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪಸಚಿವೆಯರು).—

ಅ) ವಿಶ್ವ ಕನ್ನಡ ಮೇಳ ಮ್ಯಾಂಚೆಸ್ಟರ್, ಯು. ಕೆ. ಶ್ರೀ ಹೆಚ್. ಎಸ್. ಪ್ರಭಾಕರ್.

ಏಷಿಯಾ ಫೆಸ್ಟಿವಲ್ ಮಿಯಾಮಿ, ಯು.ಎಸ್.ಎ. ಶ್ರೀಮತಿ ವೀಣಾ ಶ್ರೀರಾಮರಾವ್, ಐ.ಎ.ಎಸ್., ವ್ಯವಸ್ಥಾಪಕ ನಿರ್ದೇಶಕರು. ಶ್ರೀ ಕೆ. ಬಿ. ತಿಮ್ಮಣ್ಣ

ಆ) ಶ್ರೀ ಎಚ್. ಎಸ್. ಪ್ರಭಾಕರ್ ರೂ. ೫೫,೧೨೭–೦೦
ಶ್ರೀಮತಿ ವೀಣಾ ಶ್ರೀರಾಮರಾವ್ ರೂ. ೯೧,೮೨೩–೦೦
ಶ್ರೀ ಕೆ. ಬಿ. ತಿಮ್ಮಣ್ಣ ರೂ. ೫೨,೨೫೧–೦೦

ಇ) ಮ್ಯಾಂಚೆಸ್ಟರ್, ಯು.ಕೆ. ರೂ. ೬೦,೭೮೭–೦೦
ಏಷಿಯಾ ಫೆಸ್ಟಿವಲ್ ಯು.ಎಸ್.ಎ, ರೂ. ೫೩,೮೦೩–೦೦

ಈ) ರೂ. ೧,೭೪,೨೮೭–೦೦